# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 617**

**ಸದಸ್ಯರ ಹೆಸರು : ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ)**

**ಉತ್ತರಿಸುವ ದಿನಾಂಕ : 14.08.2025**

**ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪೊಲೀಸ್ ಮತ್ತು ಅಗ್ನಿಶಾಮಕ ಇಲಾಖೆಗಳು ತುರ್ತು ಸೇವೆಗಳ ವ್ಯಾಪ್ತಿಗೆ ಒಳಪಡುವ ಇಲಾಖೆಗಳಾಗಿವೆ; ಈ ನೌಕರರುಗಳಿಗೆ ನೀಡುವ ವಿಶೇಷ ಭತ್ಯೆಗಳನ್ನು ಸಮಾನವಾಗಿ ನೀಡಲಾಗುತ್ತಿದೆಯೇ; | ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಡ್ ಕಾನ್ಸ್‌ಟೇಬಲ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ನೌಕರರು ಜನತೆಗೆ ಅಗತ್ಯವಾದ ಭದ್ರತೆ & ಸುರಕ್ಷತೆಯನ್ನು ನೀಡುತ್ತಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪೊಲೀಸ್ ಇಲಾಖೆ ಮತ್ತು ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ ವರ್ಗದವರು ಅವರವರ ಕರ್ತವ್ಯಕ್ಕೆ ಅನುಗುಣವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಎರಡೂ ಇಲಾಖೆಗಳು ಅವರದೇ ಆದ ಪರಿಮಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವೆರಡನ್ನೂ ಹೋಲಿಕೆ ಮಾಡಲಾಗುವುದಿಲ್ಲ. |
| (ಆ) | ಈ ಇಲಾಖೆಯ ಸಿಬ್ಬಂದಿ ವರ್ಗಕ್ಕೆ ನೀಡುವ ವಾರದ ಭತ್ಯೆಯಲ್ಲಿ ವ್ಯತ್ಯಾಸವಿರುವುದಾಗಿ ತಿಳಿದು ಬಂದಿರುವುದು ನಿಜವೇ; ನಿಜವಾಗಿದ್ದರೆ, ಕಾರಣಗಳೇನು; | ವಾರದ ಭತ್ಯೆಯಲ್ಲಿ ವ್ಯತ್ಯಾಸವಿರುವುದು ನಿಜವಾಗಿರುತ್ತದೆ. ವಿವರ ಕೆಳಕಂಡಂತಿದೆ.<br><br>**<u>ಪೊಲೀಸ್ ಇಲಾಖೆ:</u>**<br>ಪೊಲೀಸ್ ಇಲಾಖೆಯಲ್ಲಿ ಹೆಡ್ ಕಾನ್ಸ್‌ಟೇಬಲ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ರೂ.200/-ಗಳ ವಾರದ ರಜಾ ಭತ್ಯೆಯನ್ನು ಸರ್ಕಾರದ ಆದೇಶ ಸಂಖ್ಯೆ: ಒಇ/187/ಪೊಸಿಇ/2013, ದಿನಾಂಕ:12.06.2014 ರನ್ವಯ ನೀಡಲಾಗುತ್ತಿದೆ.<br><br>**<u>ಅಗ್ನಿಶಾಮಕ ಮತ್ತು ತುರ್ತು ಸೇವೆಗಳು:</u>**<br>ಅಗ್ನಿಶಾಮಕ ಇಲಾಖೆಗಳು ತುರ್ತು ಸೇವೆಗಳ ಇಲಾಖೆಯ ಎಲ್ಲಾ ಕಾರ್ಯನಿರ್ವಾಹಕ ಹಾಗೂ ಆಡಳಿತಾತ್ಮಕ ಹಾಗೂ ಆಡಳಿತಾತ್ಮಕ ಅಧಿಕಾರಿ ಮತ್ತು ಸಿಬ್ಬಂದಿ ಯವರಿಗೆ ರೂ.400/-ಗಳ ವಾರದ ರಜಾ ಭತ್ಯೆಯನ್ನು ಸರ್ಕಾರದ ಆದೇಶ ಸಂಖ್ಯೆ: ಒಇ 42 ಕಅಸೇ 2015, ದಿನಾಂಕ:31.10.2017 ರನ್ವಯ ನೀಡಲಾಗುತ್ತಿದೆ.<br><br>ಪೊಲೀಸ್ ಇಲಾಖೆ ಮತ್ತು ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ ವರ್ಗದ ಅವರವರ ಕರ್ತವ್ಯಕ್ಕೆ ಅನುಗುಣವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಎರಡೂ ಇಲಾಖೆಗಳು ಅವರದೇ ಆದ ಪರಿಮಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವೆರಡನ್ನೂ ಹೋಲಿಕೆ ಮಾಡಲಾಗುವುದಿಲ್ಲ. |

| | | |
|---|---|---|
| **(ಇ)** | ಈ ವ್ಯತ್ಯಾಸವು ಇಲಾಖೆಯಲ್ಲಿನ ಸಿಬ್ಬಂದಿ ವರ್ಗದವರ ಮನೋಸ್ಥೈರ್ಯವನ್ನು ಕುಗ್ಗಿಸುವುದರಿಂದ ಇದನ್ನು ಸರಿದೂಗಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | ಮೇಲಿನ ಪ್ರಶ್ನೆ (ಅ) ಮತ್ತು (ಆ) ದಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಹೆಚ್‌ಡಿ 62 ಎಸ್‌ಎಎಸ್‌ಹೆಚ್ 2025

**(ಡಾ|| ಜಿ. ಪರಮೇಶ್ವರ)**
ಗೃಹ ಸಚಿವರು